

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಖಂದಕ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27–09–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ನಾನು ಕಳೆದ ಖುತ್ಬದಲ್ಲಿ ಸೂಚಿಸಿದಂತೆ ಅಹ್‌ಝಾಬ್ ಯುದ್ಧದ ಸ್ಥಿತಿಗತಿಗಳ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಪ್ರಸ್ತಾಪಿಸಿರುವರು. ಅವರು ಹೇಳುತ್ತಾರೆ: ಮದೀನದ ಸಾಕಷ್ಟು ಭಾಗ ಕಂದಕದಿಂದ ಸುರಕ್ಷಿತವಾಗಿತ್ತು. ಇತರ ಕಡೆಗಳಲ್ಲಿ ಕೆಲವು ಬೆಟ್ಟಗಳು, ಕೆಲವು ಮನೆಗಳು ಮತ್ತು ಕೆಲವು ತೋಟಗಳು ಇದ್ದ ಕಾರಣದಿಂದ ದಿಢೀರನೆ ಹಲ್ಲೆ ನಡೆಸಲು ಶತ್ರುಸೇನೆಗೆ ಸಾಧ್ಯವಿರಲಿಲ್ಲ. ಆದ್ದರಿಂದ ಹೇಗಾದರೂ ಸತ್ಯನಿಷೇಧಿಗಳು ಮದೀನದಲ್ಲಿ ಇರುವ ಯಹೂದಿ ಗೋತ್ರವಾದ ಬನೂ ಖುರೈಝುವನ್ನು ತಮ್ಮ ಜೊತೆಗೆ ಸೇರಿಸಲು ಮತ್ತು ಆ ಮೂಲಕ ಮದೀನಕ್ಕೆ ತಲುಪುವ ಮಾರ್ಗವನ್ನು ತೆರೆಯಲು ಸಮಾಲೋಚನೆ ನಡೆಸಿಕೊಂಡು ಯೋಜನೆ ಹಾಕಿದರು. ಬನೂ ಖುರೈಝು ಗೋತ್ರವನ್ನು ತಮ್ಮ ಜೊತೆಗೆ ಸೇರಿಸಲಿಕ್ಕಾಗಿ ಪ್ರಯತ್ನಿಸಲು ಹುಯ್ಯ್ ಬಿನ್ ಅಖ್ತಬ್‌ನನ್ನು ನೇಮಿಸಲಾಯಿತು. ಮೊದಲು ಬನೂ ಖುರೈಝುದ ಸರದಾರರು ಜೊತೆ ಸೇರಲು ನಿರಾಕರಿಸಿದರು. ಆದರೆ ಅವರೊಳಗೆ ಹುಯ್ಯ್ ಬಿನ್ ಅಖ್ತಬ್ ಲಾಲಸೆ ಉಂಟುಮಾಡಿದಾಗ ಅವರು ಒಪ್ಪಂದವನ್ನು ಮುರಿಯಲು ತಯಾರಾದರು. ಬನೂ ಖುರೈಝು ಗೋತ್ರ ಮುಸ್ಲಿಮರ ಮಿತ್ರ ಪಕ್ಷವಾಗಿತ್ತು. ಆ ಗೋತ್ರದವರು ಮುಸ್ಲಿಮರ ಜೊತೆ ಯುದ್ಧದಲ್ಲಿ ಭಾಗವಹಿಸದಿದ್ದರೂ ಶತ್ರುಗಳ ಕಡೆಯಲ್ಲಿ ನಿಂತುಕೊಂಡು ಮದೀನದ ಮೇಲೆ ದಾಳಿ ನಡೆಸಲಾರರು ಎಂಬ ಪ್ರತೀಕ್ಷೆ ಮುಸ್ಲಿಮರಿಗೆ ಇತ್ತು. ಇದೇ ಕಾರಣದಿಂದ ಅವರ ಕಡೆಯಿರುವ ಭಾಗವನ್ನು ಯಾವುದೇ ಸುರಕ್ಷೆಯಿಲ್ಲದೇ ಸಂಪೂರ್ಣವಾಗಿ ಬಿಡಲಾಗಿತ್ತು. ಅಂತಹ ಸಮಯದಲ್ಲಿ ಬನೂ ಖುರೈಝು ಗೋತ್ರ ಶತ್ರುಗಳ ಜೊತೆಗೆ ಸೇರಿಕೊಂಡಾಗ ಮದೀನದ ಮೇಲೆ ದಾಳಿಯ ಅಪಾಯ ಇನ್ನಷ್ಟು ವರ್ಧಿಸಿತು. ಹೇಗಿದ್ದರೂ ಇಂತಹ ಸ್ಥಿತಿಯಲ್ಲಿ ಮುಸ್ಲಿಮರ ಚಿಂತೆ ಸಹಜವಾಗಿತ್ತು. ಅದನ್ನು ತಡೆಯಲು ಪ್ರಯತ್ನ ಮಾಡುವುದು ಅಗತ್ಯವಾಗಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಮದೀನದ ಸಂರಕ್ಷಣೆಗಾಗಿ ಐನ್ನೂರು ವ್ಯಕ್ತಿಗಳನ್ನು ನೇಮಿಸಲು ತೀರ್ಮಾನ ಮಾಡಿದರು. ಬನೂ ಖುರೈಝು ಗೋತ್ರ ಒಪ್ಪಂದವನ್ನು ಮುರಿದ ಸುದ್ದಿ ಮುಸ್ಲಿಮರಿಗೆ ತಲುಪಿದಾಗ ಸಹಜವಾಗಿಯೇ ಮುಸ್ಲಿಮರ ಭಯ ವರ್ಧಿಸಿತು. ಮುಸ್ಲಿಮರಿಗೆ ಮಹಿಳೆಯರ ಮತ್ತು ಮಕ್ಕಳ ಬಗ್ಗೆ ಚಿಂತೆ ಉಂಟಾಗಲು ತೊಡಗಿತು. ಹಝ್ರತ್ ಪೈಗಂಬರ್(ಸ)ರಿಗೆ ಈ ಸುದ್ದಿ ಮುಟ್ಟಿದಾಗ ಅವರು ಹಝ್ರತ್ ಸಲ್ಮ ಬಿನ್ ಅಸ್ಲಮ್(ರ)ರನ್ನು ಇನ್ನೂರು ಸೈನಿಕರೊಂದಿಗೆ ಮತ್ತು ಹಝ್ರತ್ ಝೈದ್ ಬಿನ್ ಹಾರಿಸ(ರ)ರನ್ನು ಮುನ್ನೂರು ಸೈನಿಕರೊಂದಿಗೆ ಮದೀನದ ಸಂರಕ್ಷಣೆಗಾಗಿ ಕಳುಹಿಸಿದರು. ರಾತ್ರಿ ಸಮಯದಲ್ಲಿ ಬೇರೆ ಬೇರೆ ಜಾಗಗಳಲ್ಲಿ ಕಾವಲು ನಿಲ್ಲಲು ಮತ್ತು ಪದೇ ಪದೇ ಅಲ್ಲಾಹು ಅಕ್ಬರ್ ಎಂದು ಘೋಷಣೆ ಕೂಗಲು ಹಝ್ರತ್ ಪೈಗಂಬರ್(ಸ) ಅವರಿಗೆ ಆದೇಶ ನೀಡಿದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಘಟನೆಯನ್ನು ಹೀಗೆ ವಿವರಿಸಿರುವರು: ಯಾವುದೇ ವಿವೇಕವಂತನಿಗೆ ಮನವರಿಕೆ ಆಗಬಹುದಾದ ಈ ಅವಸ್ಥೆಯಿಂದ ದುರ್ಬಲ ಮುಸ್ಲಿಮರಲ್ಲಂತೂ ಬಹಳ ಕಳವಳ ಮತ್ತು ತಬ್ಬಿಬ್ಬು ಉಂಟುಮಾಡಿತು. ಕೆಲವು ಕಪಟವಿಶ್ವಾಸಿಗಳು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಪಟ್ಟಣದಲ್ಲಿ ನಮ್ಮ ಮನೆಗಳು ಪೂರ್ಣವಾಗಿಯೂ ಅರಕ್ಷಿತಾವಸ್ಥೆಯಲ್ಲಿವೆ. ನೀವು ಅನುಮತಿ ಕೊಟ್ಟರೆ ನಾವು ನಮ್ಮ ಮನೆಗಳಲ್ಲಿ ಇದ್ದುಕೊಂಡು ಅವುಗಳ ಸಂರಕ್ಷಣೆ ಮಾಡುವೆವು. ಅದಕ್ಕೆ ಉತ್ತರವಾಗಿ ಹೀಗೆ ದಿವ್ಯವಾಣಿ ಉಂಟಾಯಿತು: **ವಮಾ ಹಿಯ ಬಿ ಔರತಿನ್ ಇನ್ ಯುರೀದೂನ ಇಲ್ಲಾ ಫಿರಾರ.** (ಅವರಿಗೆ ತಮ್ಮ ಮನೆಗಳ ಅರಕ್ಷಿತಾವಸ್ಥೆಯ ಚಿಂತೆಯಿರಲಿಲ್ಲ. ಅವರು ಕೇವಲ ಯುದ್ಧ ಮೈದಾನದಿಂದ ತಪ್ಪಿಸಿ ಓಡಿಹೋಗುವ ಮಾರ್ಗವನ್ನು ಹುಡುಕುತ್ತಿದ್ದರು.) ಒಟ್ಟಿನಲ್ಲಿ ಅಂತಹ ಅಪಾಯಕಾರಿ ಸಮಯದಲ್ಲಿ ಕೆಲವು ದುರ್ಬಲರನ್ನು ಮತ್ತು ಕೆಲವು ಕಪಟವಿಶ್ವಾಸಿಗಳನ್ನು ಕೂಡ ಒಳಗೊಂಡಿರುವ ಮುಸ್ಲಿಮರ ಚಿಕ್ಕ ಸಂಘಕ್ಕೆ ಶತ್ರುಗಳನ್ನು ಎದುರಿಸಲು ಹೇಗೆ ಸಾಧ್ಯವಿತ್ತು. ಕೆಲವೊಮ್ಮೆ ಸ್ಥಿತಿಗತಿಗಳು ಬಹಳಷ್ಟು ಅಪಾಯಕರವಾಗುತ್ತಿದ್ದುವು. ಯಾವುದಾದರೂ ದುರ್ಬಲ ಸಮಯದ ಲಾಭ ಪಡೆದು ಸತ್ಯನಿಷೇಧಿಗಳ ಸೇನೆ ಪಟ್ಟಣದ ಗಡಿಗಳ ಒಳಗೆ ಪ್ರವೇಶಿಸುವ ಸಾಧ್ಯತೆಯಿತ್ತು. ಇಂತಹ ದಾಳಿಗಳನ್ನು ಮುಸ್ಲಿಮರು ಸಾಮಾನ್ಯವಾಗಿ ಬಿಲ್ಲುಗಾರಿಕೆಯ ಮೂಲಕ ತಡೆಯುತ್ತಿದ್ದರು.

ಆ ದಿನಗಳು ಮುಸ್ಲಿಮರಿಗೆ ಅತ್ಯಂತ ಕಷ್ಟ, ಚಿಂತೆ ಮತ್ತು ಅಪಾಯದ ದಿನಗಳಾಗಿದ್ದುವು. ಈ ಪರಿಸ್ಥಿತಿಯಲ್ಲಿ ಸಅದ್ ಬಿನ್ ಮುಆಧ್(ರ) ಮತ್ತು ಸಅದ್ ಬಿನ್ ಉಬಾದ(ರ)ರೊಡನೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ನೀವು ಬಯಸುವುದಾದರೆ ಗ‌ತ್‌ಫಾನ್ ಗೋತ್ರಕ್ಕೆ ಸಂಪತ್ತಿನಿಂದ ಏನಾದರೂ ಕೊಡಬಹುದೆಂದು ಹೇಳಿ ಈ ಯುದ್ಧವನ್ನು ತಡೆಯಲು ಪ್ರಯತ್ನಿಸಿರಿ. ಆಗ ಅವರಿಬ್ಬರೂ ಒಂದೇ ಸ್ವರದಲ್ಲಿ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಾವು ಶಿರ್ಕಿನ ಸ್ಥಿತಿಯಲ್ಲಿ ಕೂಡ ಶತ್ರುಗಳಿಗೆ ಏನೂ ನೀಡಿರಲಿಲ್ಲ. ಈಗ

ಮುಸ್ಲಿಮರಾಗಿ ಏಕೆ ನೀಡಬೇಕು. ಅಲ್ಲಾಹನಾಣೆ, ನಾವು ಅವರಿಗೆ ಖಡ್ಗದ ಅಂಚು ವಿನಾ ಬೇರೇನನ್ನೂ ಕೊಡುವುದಿಲ್ಲ. ಸತ್ಯದಲ್ಲಿ ಮದೀನದ ನಿಜವಾದ ನಿವಾಸಿಗಳಾದ ಅನ್ಸಾರರ ಕುರಿತೇ ಹಝ್ರತ್ ಪೈಗಂಬರ್(ಸ)ರಿಗೆ ಚಿಂತೆಯಿತ್ತು. ಇಂತಹ ಸ್ಥಿತಿಯಲ್ಲಿ ಅನ್ಸಾರರು ತಳಮಳಗೊಂಡಿರುವರೋ ಎಂಬುದನ್ನು ಅರಿತು ಅವರ ಮಾನಸಿಕ ಅವಸ್ಥೆಯನ್ನು ಗೊತ್ತುಮಾಡುವ ಮತ್ತು ಅವರು ಗಾಬರಿಗೊಂಡಿರುವುದಾದರೆ ಅವರನ್ನು ಸಮಾಧಾನಪಡಿಸುವ ಉದ್ದೇಶದಿಂದಲೇ ಬಹುಶಃ ಈ ಸಲಹೆಯನ್ನು ಹಝ್ರತ್ ಪೈಗಂಬರ್(ಸ) ಕೇಳಿರಬಹುದು. ಅವರ ಉತ್ತರವನ್ನು ಕೇಳಿ ಹಝ್ರತ್ ಪೈಗಂಬರ್(ಸ) ಬಹಳ ಸಂತೋಷಗೊಂಡು ಅವರ ಸಲಹೆಯನ್ನು ಅಂಗೀಕರಿಸಿದರು ಮತ್ತು ಯುದ್ಧ ಮುಂದುವರೆಯಿತು.

ಈ ಚಿಂತಾಜನಕ ಸ್ಥಿತಿಯಲ್ಲಿ ವಿವಿಧ ಸ್ಥಳಗಳಲ್ಲಿ ಹಝ್ರತ್ ಪೈಗಂಬರ್(ಸ) ಸಹ ಸ್ವತಃ ಕಾವಲು ನಿಲ್ಲುತ್ತಿದ್ದರು. ಆಗ ಮದೀನದ್ದು ಬಹಳ ಚಳಿಯ ರಾತ್ರಿಗಳಾಗಿದ್ದುವು. ಹಸಿವಿನ ಕಷ್ಟತೆಗಳು ಬೇರೆ. ಹಝ್ರತ್ ಆಯಿಶ(ರ) ಹೇಳುತ್ತಾರೆ: ಒಂದು ದಿನ ಹಝ್ರತ್ ಪೈಗಂಬರ್(ಸ) ಎಷ್ಟು ಆಯಾಸಗೊಂಡಿದ್ದರು ಎಂದರೆ, ಅವರು ಹೀಗೆ ಹೇಳಿದರು: ಕಾವಲು ನಿಲ್ಲಲು ಯಾರಾದರೂ ಒಳ್ಳೆಯ ವ್ಯಕ್ತಿ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಆಗ ಸಅದ್ ಬಿನ್ ವಖಾಸ್(ರ) ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಾನು ನಿಮ್ಮ ಸಂರಕ್ಷಣೆಗಾಗಿ ಕಾವಲು ನಿಲ್ಲುತ್ತೇನೆ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಇಂತಿಂತಹ ಸ್ಥಳಕ್ಕೆ ಹೋಗು, ಅಲ್ಲಿ ಕಂದಕದ ದುರ್ಬಲವಾದ ಒಂದು ಭಾಗವಿದೆ. ಅಲ್ಲಿಗೆ ಹೋಗಿ ಕಾವಲು ನಿಲ್ಲು. ಹಝ್ರತ್ ಪೈಗಂಬರ್(ಸ)ರ ತ್ಯಾಗಶೀಲ ಸಹಾಬಿಯರ ನಿಷ್ಠೆಯ ಸ್ಥಿತಿಯು ಅದ್ಭುತಕರವಾಗಿತ್ತು. ಅವರು ಈ ರೀತಿಯಾಗಿ ಸ್ವತಃ ತಮ್ಮನ್ನು ಸಮರ್ಪಿಸುತ್ತಿದ್ದರು. ಮತ್ತೊಂದೆಡೆ ಹಝ್ರತ್ ಪೈಗಂಬರ್(ಸ) ತನ್ನ ಸ್ವಂತ ಜೀವಕ್ಕಿಂತ ಇತರರಿಗೆ ಆದ್ಯತೆ ನೀಡುತ್ತಿದ್ದರು. ಅವರು ಎಂತಹ ಧೈರ್ಯವಂತರು ಆಗಿದ್ದರು ಎಂದರೆ, ತನ್ನ ಜೀವದ ಚಿಂತೆ ಬಿಟ್ಟು ಅವರಿಗೆ ಮದೀನ ನಿವಾಸಿಗಳ ಚಿಂತೆಯಿತ್ತು. ಅದಕ್ಕಾಗಿ ಹೆಚ್ಚಾಗಿ ಸ್ವತಃ ಹಲವೆಡೆ ಇರುತ್ತಿದ್ದರು. ಕೆಲವೊಮ್ಮೆ ವಿಶ್ರಾಂತಿ ಪಡೆಯಲು ಡೇರೆಗೆ ಹೋಗುತ್ತಿರುವುದಾಗಿ ತೋರಿಬರುತ್ತಿತ್ತಾದರೂ ಅದರ ಹೆಚ್ಚಿನ ಭಾಗ ಅಲ್ಲಾಹನ ಮುಂದೆ ಸಾಷ್ಟಾಂಗ ಮಾಡಿಕೊಂಡು ದುಆ ಮಾಡುವುದಾಗಿ ಕಾಣಬಹುದಾಗಿತ್ತು.

ಈ ಯುದ್ಧದ ವೇಳೆ ಹಝ್ರತ್ ಸಫಿಯ(ರ)ರ ಶೌರ್ಯದ ಘಟನೆಯೂ ವರದಿಯಾಗಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಮಹಿಳೆಯರನ್ನು ಮತ್ತು ಮಕ್ಕಳನ್ನು ಪಟ್ಟಣದಲ್ಲಿ ಕೋಟೆಯಂತಹ ಒಂದು ವಿಶಿಷ್ಟ ಭಾಗದಲ್ಲಿ ಇರಿಸಲಾಗುತ್ತಿತ್ತು. ಯುದ್ಧ ಮೈದಾನದಲ್ಲಿ ಹೋಗಲು ತೀರಾ ಯೋಗ್ಯರಲ್ಲದ ಪುರುಷರನ್ನು ಅವರ ಸಂರಕ್ಷಣೆಗಾಗಿ ಉಳಿಸಲಾಗಿತ್ತು. ಯಹೂದಿಯರು ಒಂದು ಸಂದರ್ಭದಲ್ಲಿ ಗೂಢಚರ್ಯೆಗಾಗಿ ಒಂದು ವ್ಯಕ್ತಿಯನ್ನು ಆ ಪ್ರದೇಶಕ್ಕೆ ಕಳುಹಿಸಿದರು. ಆ ಸಮಯದಲ್ಲಿ ಮಹಿಳೆಯರ ಬಳಿ ಸಹಾಬಿಯಾದ ಹಸ್ಸಾನ್ ಬಿನ್ ಸಾಬಿತ್(ರ) ಮಾತ್ರ ಇದ್ದರು. ಶತ್ರುವಾದ ಆ ಯಹೂದಿ ವ್ಯಕ್ತಿಯನ್ನು ಸಂಶಯಾಸ್ಪದ ಸ್ಥಿತಿಯಲ್ಲಿ ತಮ್ಮ ತಂಗುದಾಣದ ಆಸುಪಾಸಿನಲ್ಲಿ ಸುತ್ತಾಡುತ್ತಾ ಇರುವುದಾಗಿ ಮಹಿಳೆಯರು ಕಂಡಾಗ ಆತನನ್ನು ವಧಿಸಲು ಹಝ್ರತ್ ಪೈಗಂಬರ್(ಸ)ರ ಪಿತೃ ಸಹೋದರಿ ಸಫಿಯ ಬಿನ್ತ್ ಅಬ್ದುಲ್ ಮುತ್ತಲಿಬ್(ರ) ಹಸ್ಸಾನ್(ರ)ರೊಡನೆ ಹೇಳಿದರು. ಆದರೆ ಆತನನ್ನು ವಧಿಸಲು ಹಸ್ಸಾನ್(ರ) ಧೈರ್ಯಪಡಲಿಲ್ಲ. ಆಗ ಹಝ್ರತ್ ಸಫಿಯ(ರ) ಸ್ವತಃ ಮುಂದಕ್ಕೆ ಬಂದು ಆ ಯಹೂದಿಯೊಡನೆ ಹೋರಾಡಿ ಆತನನ್ನು ವಧಿಸಿದರು ಮತ್ತು ಮುಸ್ಲಿಮ್ ಮಹಿಳೆಯರ ಮೇಲೆ ದಾಳಿ ನಡೆಸಲು ಯಹೂದಿಯರಿಗೆ ಧೈರ್ಯ ಉಂಟಾಗದಿರಲು ಹಾಗೂ ಅವರ ಸಂರಕ್ಷಣೆಗಾಗಿ ಅಲ್ಲಿ ಸಾಕಷ್ಟು ಪುರುಷರು ಇದ್ದಾರೆ ಎಂದು ಭಾವಿಸುವಂತಾಗಲು ಆತನ ತಲೆಯನ್ನು ಕತ್ತರಿಸಿ ಯಹೂದಿಯರ ಕಡೆಗೆ ಎಸೆದರು. ಹೀಗೆ ಈ ತಂತ್ರ ಫಲಪ್ರದವಾಯಿತು ಮತ್ತು ಯಹೂದಿಯರು ಭಯಗೊಂಡು ಅಲ್ಲಿಂದ ಮರಳಿ ಹೋದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಈ ಘಟನೆಯನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ: ಆತನು ಯಹೂದಿಯಾಗಿದ್ದನು ಮತ್ತು ಬನೂ ಖುರೈಝದ ಗುಪ್ತಚರನಾಗಿದ್ದನು ಎಂದು ಅನ್ವೇಷಣೆ ನಡೆಸಿದಾಗ ಗೊತ್ತಾಯಿತು. ಆಗ ಮುಸ್ಲಿಮರು ಇನ್ನಷ್ಟು ಗಾಬರಿಗೊಂಡರು ಮತ್ತು ಈಗ ಮದೀನದ ಈ ಭಾಗವೂ ಸುರಕ್ಷಿತವಲ್ಲವೆಂದು ಅರಿತುಕೊಂಡರು. ಮಹಿಳೆಯರ ಸಂರಕ್ಷಣೆ ಬಹಳ ಮುಖ್ಯವೆಂದು ಹಝ್ರತ್ ಪೈಗಂಬರ್(ಸ) ಭಾವಿಸಿದರು ಮತ್ತು ಸಾವಿರದ ಇನ್ನೂರು ಸೈನಿಕರಲ್ಲಿ ಐನ್ನೂರು ಸೈನಿಕರನ್ನು ಮಹಿಳೆಯರ ಸಂರಕ್ಷಣೆಗಾಗಿ ಪಟ್ಟಣದಲ್ಲಿ ನೇಮಿಸಿದರು. ಕಂದಕದ ಸಂರಕ್ಷಣೆ ಮತ್ತು ಹದಿನೆಂಟು ಇಪ್ಪತ್ತು ಸಾವಿರ ಸೈನಿಕರನ್ನು ಎದುರಿಸಲು ಕೇವಲ ಏಳು ನೂರು ಸೈನಿಕರು ಬಾಕಿಯುಳಿದಿದ್ದರು.

ಅಮ್ರ್ ಬಿನ್ ಅಬ್ದು ವುದ್ದ್‌ನನ್ನು ಹಝ್ರತ್ ಅಲಿ(ರ) ವಧಿಸಿದ ಘಟನೆಯೂ ವರದಿಯಾಗಿದೆ. ಅಮ್ರ್ ಬಿನ್ ಅಬ್ದು ವುದ್ದ್ ಎಂತಹ ಶೌರ್ಯವಂತನಾಗಿದ್ದನು ಎಂದರೆ, ಆತನನ್ನು ಅರೇಬಿಯದ ಒಂದು ಸಾವಿರ ಪುರುಷರಿಗೆ ಸಮಾನನೆಂದು ಭಾವಿಸಲಾಗುತ್ತಿತ್ತು. ಆತನು ತನ್ನ ಎರಡು ಸಂಗಡಿಗರ ಜೊತೆಗೆ ಕಂದಕವನ್ನು ಪಾರು ಮಾಡಿ ಬಂದನು. ಆತ ಬಹಳ ಜಂಭದಿಂದ ಹೀಗೆ ಘೋಷಿಸಿದನು: ಎಲೈ ಸ್ವರ್ಗದ ಅಭಿಲಾಷಿಗಳೇ, ಬನ್ನಿರಿ ನಾನು ನಿಮ್ಮನ್ನು ಸ್ವರ್ಗಕ್ಕೆ ಕಳುಹಿಸುತ್ತೇನೆ ಅಥವಾ ನೀವು ನನ್ನನ್ನು ನರಕಕ್ಕೆ ಕಳುಹಿಸಿರಿ. ಆ ರೀತಿ ಆತ ಎರಡನೇ ಅಥವಾ ಮೂರನೇ ಬಾರಿ ಕರೆ ನೀಡಿದಾಗ, ಹಝ್ರತ್ ಪೈಗಂಬರ್(ಸ) ತನ್ನ ಮುಂಡಾಸನ್ನು ಸ್ವತಃ ಹಝ್ರತ್ ಅಲಿ(ರ)ರ ತಲೆಗೆ ಕಟ್ಟಿ ತನ್ನ ಖಡ್ಗವನ್ನು ಅವರಿಗೆ ಕೊಟ್ಟರು ಮತ್ತು ದುಆ ಮಾಡುತ್ತಾ ಹೋರಾಡಲು ಕಳುಹಿಸಿದರು. ಆತನು ಸೆಣಸಾಡಿದನು ಮತ್ತು ಹಝ್ರತ್ ಅಲಿ(ರ) ಆತನನ್ನು ವಧಿಸಿದರು. ಆತನ ವಧೆಯ ನಂತರ ಆತನ ಜೊತೆಗಾರರು ತಪ್ಪಿಸಿ ಓಡಿದರು. ಒಂದು ವರದಿಯ ಪ್ರಕಾರ ಹಝ್ರತ್ ಉಮರ್(ರ)ರ ಸಹೋದರನಾದ ಝಿರಾರ್ ಬಿನ್ ಖತ್ತಾಬ್ ಓಡಿ ಹೋದಾಗ ಹಝ್ರತ್ ಉಮರ್(ರ) ಆತನನ್ನು ಹಿಂಬಾಲಿಸಿದರು. ಝಿರಾರ್ ಅಚಾನಕ್ಕಾಗಿ

ನಿಂತು ಹಝ್ರತ್ ಉಮರ್(ರ)ರ ಮೇಲೆ ಈಟಿಯಿಂದ ಹಲ್ಲೆ ನಡೆಸಲು ಮುಂದಾಗಿ ದಿಢೀರನೇ ಹಲ್ಲೆ ನಡೆಸುವುದರಿಂದ ಹಿಂದೆ ಸರಿದನು. ಇದರಲ್ಲಿ ಝಿರಾರ್‌ನ ಔದಾರ್ಯವೇನೂ ಇಲ್ಲ. ಬದಲಾಗಿ ಅಲ್ಲಾಹನ ಔದಾರ್ಯ ಅವನ ಮೇಲೆ ಉಂಟಾಯಿತು ಎಂದು ಹೇಳಬೇಕು. ಅದು ಹೇಗೆಂದರೆ, ಮಕ್ಕಾ ವಿಜಯದ ವೇಳೆ ಇದೇ ಝಿರಾರ್ ಇಸ್ಲಾಂ ಸ್ವೀಕಾರ ಮಾಡಿಕೊಂಡರು. ಅನಂತರ ಇಸ್ಲಾಮಿನ ಯುದ್ಧಗಳಲ್ಲಿ ಅವರು ಪೂರ್ಣವಾಗಿ ಪಾಲ್ಗೊಂಡರು. ಅವರು ಚೆನ್ನಾಗಿ ಶೌರ್ಯದ ಕೌಶಲವನ್ನು ತೋರಿಸಿದರು ಮತ್ತು ಯಮಾಮ ಯುದ್ಧದಲ್ಲಿ ಹುತಾತ್ಮರಾದರು. ಕೆಲವರ ಪ್ರಕಾರ ಅವರು ಶಹೀದ್ ಆಗಿರಲಿಲ್ಲ. ಬದಲಾಗಿ ದೀರ್ಘಕಾಲ ಜೀವಂತರಾಗಿದ್ದರು ಮತ್ತು ಇಸ್ಲಾಂ ಧರ್ಮದಲ್ಲಿ ಇದ್ದುಕೊಂಡು ನಿಧನಗೊಂಡರು.

ಕೆಲವು ವರದಿಗಳ ಪ್ರಕಾರ ಅಮ್ರ್ ಬಿನ್ ಅಬ್ದು ವುದ್ದ್‌ನ ಬದಲಿಗೆ ನೌಫಲ್ ಬಿನ್ ಅಬ್ದುಲ್ಲಾಹ್ ಒಂದು ಸಂದರ್ಭದಲ್ಲಿ ವಧಿಸಲ್ಪಟ್ಟಿದ್ದನು. ಆತನ ಮೃತಶರೀರವನ್ನು ಬಿಟ್ಟುಕೊಡಲು ಸತ್ಯನಿಷೇಧಿಗಳು ಹಝ್ರತ್ ಪೈಗಂಬರ್(ಸ)ರಿಗೆ ಸಂದೇಶ ಕಳುಹಿಸಿದರು. ಆತನ ಶವಶರೀರವನ್ನು ಮರಳಿ ಕೊಟ್ಟರೆ ಹತ್ತು ಸಾವಿರ ದಿರ್ಹಂ ಹಝ್ರತ್ ಪೈಗಂಬರ್(ಸ)ರಿಗೆ ನೀಡಲು ತಯಾರಿರುವರು ಎಂದು ಅವರು ಹೇಳಿದರು. ಯಾವ ರೀತಿಯಲ್ಲಿ ಅವರು ಮುಸ್ಲಿಂ ಮುಖಂಡರ ಮತ್ತು ಸ್ವತಃ ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರ ಮೂಗು ಮತ್ತು ಕಿವಿಗಳನ್ನು ಉಹುದ್ ಯುದ್ಧದಲ್ಲಿ ಕತ್ತರಿಸಿದರೋ ಹಾಗೆಯೇ ಬಹುಶಃ ಮುಸ್ಲಿಮರು ಕೂಡ ಅವರ ಮುಖಂಡರ ಮೂಗು ಮತ್ತು ಕಿವಿಗಳನ್ನು ಕತ್ತರಿಸಿ ಅವರ ಕೋಮನ್ನು ನಿಂದಿಸುವರು ಎಂದು ಶತ್ರುಗಳು ಭಾವಿಸಿದ್ದರು. ಆದರೆ ಇಸ್ಲಾಮಿನ ಆದೇಶಗಳು ಸಂಪೂರ್ಣವಾಗಿಯೂ ಬೇರೆ ರೀತಿಯದ್ದಾಗಿದ್ದುವು. ಮೃತಶರೀರವನ್ನು ನಿಂದಿಸಲು ಇಸ್ಲಾಂ ಅನುಮತಿ ನೀಡುವುದಿಲ್ಲ. ಸತ್ಯನಿಷೇಧಿಗಳ ಸಂದೇಶ ಹಝ್ರತ್ ಪೈಗಂಬರ್(ಸ)ರಿಗೆ ತಲುಪಿದಾಗ ಅವರು ಹೀಗೆ ಹೇಳಿದರು: ಈ ಶವಶರೀರವನ್ನು ನಾವೇನು ಮಾಡುವುದು? ಇದಕ್ಕೆ ಬದಲಾಗಿ ನಿಮ್ಮಿಂದ ಬೆಲೆಯನ್ನು ಪಡೆಯುವಂಥದ್ದಾಗಿ ಇದರಲ್ಲಿ ಏನಿದೆ? ಈ ಶವಶರೀರವನ್ನು ಖುಶಿಯಿಂದ ತೆಗೆದುಕೊಂಡು ಹೋಗಿರಿ. ನಮಗೆ ಇದರೊಂದಿಗೆ ಯಾವುದೇ ಸಂಬಂಧವಿಲ್ಲ.

ಖುತ್ಬದ ಕೊನೆಯಲ್ಲಿ ಹುಝೂರ್ ಉಪಸಂಘಟನೆಗಳ ಇಜ್ತಿಮಾಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಉಪದೇಶಿಸಿದರು: ಈ ದಿನಗಳಲ್ಲಿ ವಿಶೇಷವಾಗಿ ಬಹಳಷ್ಟು ಸಮಯ ಪ್ರಾರ್ಥನೆಗಳಲ್ಲಿ ತಲ್ಲೀನರಾಗಿರಿ. ದುರೂದ್ ಹೇಳುವುದರ ಕುರಿತು ಗಮನ ನೀಡಿರಿ. ಅಲ್ಲಾಹನು ನಿಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ. ಇಜ್ತಿಮಾದ ಉದ್ದೇಶವನ್ನು ಈಡೇರಿಸಲು ಪ್ರಯತ್ನಿಸಿರಿ. ಕೇವಲ ಮನೋರಂಜಕ ಕಾರ್ಯಕ್ರಮಗಳಲ್ಲಿ ಅಥವಾ ಮಾತುಗಾರಿಕೆಯಲ್ಲಿ ಸಮಯ ಕಳೆಯದಿರಿ. ಅಲ್ಲಾಹನು ಎಲ್ಲ ವಿಧದಲ್ಲೂ ಇದನ್ನು ಅನುಗ್ರಹೀತಗೊಳಿಸಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak',*** *Islamabad, Tilford,* U.K. On 27-09-2024

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****: khutuba.kannada@gmail.com*

**You can find all the Sermons archived at**: www.alislam.org/friday-sermon